ಶ್ರೀ ರಾಮಕೃಷ್ಣ ಹೆಗಡೆ.—ಕಚೆಮಿಯೂ ಅಲ್ಲ, ಜಾಸ್ತಿಯೂ ಅಲ್ಲ. ಕೊಡಬೇಕಾದ ಪ್ರಮಾಣದಲ್ಲಿ ಅದಿದೆ.

Sri. B. P. GANGADHAR.—May I know how many times this Government has raised new loans to clear the old loans? You can just give the number of times you have done so.

ಶ್ರೀ ರಾಮಕೃಷ್ಣ ಹೆಗಡೆ.—ಹಳೇ ಸಾಲ ಕೊಡುವುದಕ್ಕೆ ಹೊಸ ಸಾಲ ನಾವು ಮಾಡಿದ್ದಿಲ್ಲ. ಆದರೆ ಪ್ರತಿ ವರ್ಷ ಸಾಲ ತೀರಿಸುವಂತೆ ಸಾಲ ಎತ್ತುವುದೂ ಇದೆ. ಅದು ನಿರಂತರವಾಗಿ ನಡೆಯುವ ವ್ಯವಹಾರ.

Sri D. B. KALMANKAR.—May I know whether the Government has requested the Central Government and other agencies to write off the loans or dues?

Sri RAMAKRISHNA HEGDE.—No, Sir. We have not asked the Central Government to write off the loans. It is not possible because the Central Government also borrows money from various agencies from outside India. Therefore our request cannot be accepted. We have never asked the Government of India to write off.

ಶ್ರೀ ಎಸ್. ಗೋಪಾಲಗೌಡ.—ಸರಕಾರದವರು ಸಾಲ ಮಾಡಿಯಾದರೂ ತುಪ್ಪತಿನ್ನಬೇಕು ಎಂದು ಹೇಳುವುದಾದರೆ ಅವರು ಚಾರ್ವಾಕಮತಕ್ಕೆ ಸೇರಿದವರೇ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ಕೆಲಸವನ್ನೂ ಮಾಡಬೇಕಾದರೆ ಸಾಲ ಮಾಡಲೇಬೇಕು.

Officials of Excise Department

241 Sri B. GANGANNA (Kallambella).—

Will the Minister for Finance, Planning and Youth Welfare be pleased to state :—

(*a*) the number of officers employed by the State Government in the Excise Department after relaxation of prohibition;

(*b*) date and the nature of appointments made;

(*c*) the nature of Security of service extended to the officials appointed?

A.—Sri RAMAKRISHNA HEGDE (Minister for Finance, Planning and Youth Welfare).—

(*a*) Class III : 645; Class IV : 1,079.

(*b*) The appointments have been made between the period from the 12th of December 1967 to the end of August 1968 and they are all of temporary nature.

(*c*) As they are local candidates no security is available.

ಶ್ರೀ ಬಿ. ಗಂಗಣ್ಣ.—ಉತ್ತರದಲ್ಲಿ ಕೇವಲ ಚಿಂಪೊರೆರಿ ಅಸಾಯಿಂಟ್‌ಮೆಂಟುಗಳು ಮತ್ತು ಆರ್ಡರ್ಸ್ ತೆಗೆಯುವ ವರಗೆ ನೇಮಕವಾಡರಾಗಿದೆ ಎಂದು ತಿಳಿಸಿದೆ. ಈಗ ಅವರು

ಸೆಪ್ಟಂಬರಿನಲ್ಲೂ ಕೆಲಸಮಾಡುತ್ತಿದ್ದಾರೆ. ಅವರನ್ನು ಮುಂದುವರೆಸುವುದಕ್ಕೆ ಏನು ಕ್ರಮ ಕೈಕೊಳ್ಳಲಾಗಿದೆ ? ಅವರನ್ನು ಖಾಯಂ ಮಾಡುವ ವ್ಯವಸ್ಥೆ ಏನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಜಾಗಗಳಿಗೆ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಪಿ. ಎಸ್. ಸಿ.ಗೆ ತಿಳಿಸಿದ್ದೇವೆ. ಅವರು ಕ್ರಮ ತೆಗೆದುಕೊಂಡು ರೆಗ್ಯುಲರ್ ಆಗಿ ಅಪಾಯಿಂಟ್ ಮಾಡಿದರೆ ಕಂಟಿನ್ಯೂ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಿ. ಎಸ್. ಸಿ. ಎಷ್ಟು ದಿವಸಗಳಲ್ಲಿ ಆ ಕೆಲಸ ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.—ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಬೇಗನೆ ಮಾಡ ಬೇಕೆಂದು ಹೇಳಿದೆ.

1-00 P.M.

ಶ್ರೀ ಎ. ಮುನಿಯಪ್ಪ.—ಸ್ವಾಮಿ, 3ನೇ ವರ್ಗದ ಅಧಿಕಾರಿಗಳು 645, 4ನೇ ವರ್ಗದ ಅಧಿಕಾರಿಗಳು 1079 ಹೀಗೆ ನೇಮಕ ಮಾಡಿದ್ದೀರಿ. ಇದರಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಎಷ್ಟು ಷೆಡ್ಯೂಲ್ ಟ್ರೈಬ್ಸ್ ಎಷ್ಟು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ಹೇಳುವುದಕ್ಕಾಗುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ಪರ್ಮನೆಂಟ್‌ಆಗಿ ಅಪಾಯಿಂಟ್ ಮಾಡುವಾಗ ಅವರು ರಿಸರ್ವೇಷನ್‌ನ್ನು ಗಮನದಲ್ಲಿಟ್ಟು ಕೊಂಡು ಮಾಡುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಟೆಂಪರರಿಯಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಅವರು ಕೆಲವು ದಿವಸ ಕೆಲಸಮಾಡುತ್ತಾರೆ. ಆನಂತರ ರೆಕ್ರೂಟ್‌ಮೆಂಟ್ ಬೋರ್ಡ್‌ನಿಂದ ಅವರನ್ನು ಮನೆಗೆ ಕಳುಹಿಸುತ್ತಾರೆ. ಅವರು ಕೆಲಸ ಮಾಡಿರುವುದರಿಂದ ಅವರ ಅನುಭವ ಮತ್ತು ಸರ್ವಿಸ್ ಅನ್ನು ಉಪಯೋಗಿಸಿಕೊಂಡು ಅವರನ್ನು ಅಲ್ಲ ಇಟ್ಟುಕೊಳ್ಳುವುದಕ್ಕೆ ಸಾಧ್ಯ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎರಡು ವಿಧವಾದ ಜನರನ್ನೂ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಟೆಂಪರರಿಯಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ಅಪಾಯಿಂಟ್ ಮಾಡುವುದಕ್ಕೆ ಯಾವರೀತಿಯಾಗಿ ರೆಕ್ರೂಟ್‌ಮೆಂಟ್ ಪಾಲಸಿಯಿಂದ ಮಾಡಬೇಕೋ ಆ ರೀತಿ ಮಾಡು ತ್ತಾರೆ. ಟೆಂಪರರಿಯಾಗಿ ತೆಗೆದುಕೊಳ್ಳುವವರನ್ನು ಮೊದಲೇ ಸ್ಪಷ್ಟವಾಗಿ ತಿಳಿಸಿ ತೆಗೆದುಕೊಂಡಿರುತ್ತೇವೆ. ರಿಸ್ಕ್ ಅವರು ತೆಗೆದುಕೊಳ್ಳಬೇಕು.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, 3ನೇ ವರ್ಗದ ಅಧಿಕಾರಿಗಳು 645 ಮತ್ತು 4ನೇ ವರ್ಗದ ಅಧಿಕಾರಿಗಳು 1079 ಇವರನ್ನು ಟೆಂಪರರಿ ಬೇಸಿಸ್ ಮೇಲೆ ಅಪಾ ಯಿಂಟ್ ಮಾಡಿದ್ದೀರಿ. ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಶೇಕಡ 18 ಪರ್ಸೆಂಟು ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ರಿಸರ್ವೇಷನ್ ಮಾಡಬೇಕು ಎಂದು ಇದೆ; ಅದನ್ನು ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ನಾನು ಆಗಲೇ ಉತ್ತರ ಹೇಳಿದ್ದೇನೆ.

Sri S. R. BOMMAI.—In the case of local candidates who have worked in the Government for 2 or 3 years, will they not become age barred ?

Sri RAMAKRISHNA HEGDE.—Government do not continue temporary employees beyond 9 months. It is expected that the Public Service Commission would be able to recruit this category of officers and officials before that time.

ಶ್ರೀ ಶರಣಗೌಡ ಇನಾಂದಾರ್.—ತಾವು ಅಬ್ಕಾರಿ ಇರಾಖೆಯಲ್ಲಿ ರೆಕ್ರೂಟ್ ಮಾಡುವಾಗ ಟೆಂಪರರಿ ಬೇಸಿಸ್ ಮೇಲೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಅವರನ್ನು ಅಲ್ಲೇ ಮುಂದುವರಿಸಿ ರೆಗ್ಯುಲರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಈ ಪ್ರಶ್ನೆ ಸರಿಯಾಗಿ ಅರ್ಥವಾಗಿಲ್ಲ ಎನ್ನುವುದು ಕಾಣುತ್ತದೆ. ಸರ್ಕಾರದವರು ರೆಕ್ರೂಟ್ ಮಾಡಬೇಕಾದರೆ ಕೆಲವು ನಿಯಮಗಳು ಇವೆ. ಅದರ ಪ್ರಕಾರ ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ರೆಕ್ರೂಟ್ ಮಾಡುವುದಕ್ಕೆ ಹೇಳುತ್ತೇವೆ. ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ತೀವ್ರಗತಿಯಲ್ಲಿ ಮಾಡುವುದಕ್ಕಾಗುವುದಿಲ್ಲ, ಸ್ವಲ್ಪ ಕಾಲಾವಕಾಶ ತೆಗೆದುಕೊಳ್ಳುತ್ತಾರೆ. ಅಲ್ಲಿಯವರಗೆ ಬೇರೆ ಡಿಪಾರ್ಟ್‌ಮೆಂಟಿನಿಂದ ಅದಷ್ಟು ಜನರನ್ನು ತೆಗೆದು ಕೊಳ್ಳುತ್ತಾರೆ. ಹಾಗೂ ಇನ್ನೂ ಬೇಕಾದರೆ ತಾತ್ಕಾಲಿಕವಾಗಿ ತೆಗೆದುಕೊಳ್ಳುತ್ತಾರೆ.

Implementation of Agricultural Minimum Wages Act

242. Sri M. BASAVARAJU (K. R. Nagar).—

Will the Minister for Labour be pleased to state :—

(*a*) the number of agricultural labourers existing during the last 3 years (District and Talukwise and yearwise figures may kindly be furnished) ;

(*b*) of them the number that are actually getting the benefit of agricultural minimum wages ;

(*c*) the machinery and agency the Government has got for implementation of Agricultural Minimum Wages Act ;

(*d*) the measures that the Government propose to adopt to get th Agricultural Minimum Wages Act implemented ?

A.—Sri K. PUTTASWAMY (Minister for Labour).—

(*a*) No statistics is available.

(*b*) In view of (*a*), information not available.

(*c*) The Government has notified 76 Labour Inspectors as Inspectors under the Minimum Wages Act. 10 Labour Officers and 6 Assistant Labour Commissioners have also been notified as Inspectors under the said Act and these officers supervise the work of Labour Inspectors.

(*d*) The Labour Inspectors are making every effort to get the various provisions of Minimum Wages Act implemented. The Labour Officers and the Assistant Labour Commissioners who are Supervising Officers are making unremitting efforts to get the revised rates of minimum wages and other provisions of the Act implemented. In a few cases prosecutions have also been launched.

ಶ್ರೀ ಎಂ. ಬಸವರಾಜು.—ಪ್ರಶ್ನೆಗೆ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಕುದರೆಗಳ ಸಂಖ್ಯೆಗಿಂತ ಲಾಯಗಳ ಸಂಖ್ಯೆಯೇ ಜಾಸ್ತಿಯಾಗಿದೆ ಎಂದು ಕಾಣುತ್ತದೆ. ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಏಕೆ ನೇಮಕ ಮಾಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳಿದ್ದು ನನಗೆ ಸ್ಪಷ್ಟವಾಗಿಲ್ಲ. ಮೈಸೂರು ರಾಜ್ಯದಲ್ಲಿ 26,377 ಗ್ರಾಮಗಳಿವೆ ಮತ್ತು 17,61,110 ಜನ ವ್ಯವಸಾಯ ಕಾರ್ಮಿಕರಿದ್ದಾರೆ. ಮೂರು ನಾಲ್ಕು ತಾಲ್ಲೂಕುಗಳಿಗೆ ಒಬ್ಬ ರೇಬರ್ ಇನ್‌ಸ್ಪೆಕ್ಟರ್‌ನ್ನು ಹಾಕಿದರೆ ಎಷ್ಟರಮಟ್ಟಿಗೆ